ಝಳಪಿಸಲೂ ಸಹ ಜಾಗವಿರಲಿಲ್ಲ. ಪ್ರವಾದಿಯ ಸಿಟ್ಟು ನೆತ್ತಿಗೇರಿ ಚಿನ್ನದ ದಂಡದಿಂದಲೇ ಬ್ರೇಕಿಂಗ್ ನ್ಯೂಸ್ ಕೊಡುತ್ತಿದ್ದ ಒಬ್ಬನಿಗೆ ಸರಿಯಾಗಿ ಹೊಡೆದುಬಿಟ್ಟನು. ಹೊಡೆತ ಬುರುಡೆಗೆ ಬಿದ್ದಿತು. ಅದು ಲೈವ್ ಆಗಿ ಬಿತ್ತರಗೊಂಡು ಪ್ರವಾದಿಯ ಆಕ್ರೋಶಕ್ಕೆ ಜನ ಭಯಭೀತರಾಗಿ ಭಕ್ತಿಭಾವ ಇನ್ನೂ ಹೆಚ್ಚಾಯಿತು.

ಹೀಗೆ ಪ್ರವಾದಿಯ ಆಯಸ್ಸಿನ ವ್ಯಾಪಾರ ಉತ್ತುಂಗ ಸ್ಥಿತಿಯಲ್ಲಿದ್ದಾಗಲೇ ಆ ನಾಡಿನ ಪ್ರಖ್ಯಾತ ನಟ, ಲಕ್ಷಾಂತರ ಅಭಿಮಾನಿಗಳ, ಭಕ್ತರ ಪ್ರತ್ಯಕ್ಷ ದೈವ ಪ್ರವಾದಿ ಕೇಂದ್ರಕ್ಕೆ ಆಗಮಿಸಿದ. ದೇಹದಾರ್ಢ್ಯಪಟುವಾಗಿದ್ದ ಆತ ಆರೋಗ್ಯದಿಂದ ಮಿಂಚುತ್ತಿದ್ದ. ಸಣ್ಣ ವಯಸ್ಸಿಗೇ ಆತ ಹಿಂದೆ ಯಾರೂ ಗಳಿಸದಂಥ ದುಡ್ಡಿನ ಗುಡ್ಡವನ್ನು, ಜನಪ್ರಿಯತೆಯನ್ನು ಗಳಿಸಿದ್ದ. ನಾಡಿನ ಯುವಕರೆಲ್ಲ ಅವನಂತೆಯೇ ಮಾತಾಡುತ್ತಿದ್ದರು, ನಗುತ್ತಿದ್ದರು, ನಡೆದಾಡುತ್ತಿದ್ದರು ಮತ್ತು ಹೊಡೆದಾಡುತ್ತಿದ್ದರು. ಸಿನಿಮಾಗಳಲ್ಲಿ ನಟನ ಪಾತ್ರಕ್ಕೆ ಮಬ್ಬು ಭಕ್ತರು ಮತ್ತು ಪ್ರೇಯಸಿಯರ ಹೊರತಾಗಿ ತಾಯಿ, ತಂದೆ, ಗುರು ಹಿರಿಯರು, ಮನೆ ಮಠ ಏನೂ ಇರುತ್ತಿರಲಿಲ್ಲವಾದ್ದರಿಂದ ನಟನ ಅಭಿಮಾನಿಗಳಿಗೂ ಅದೇ ಆದರ್ಶವಾಗಿ ಕಂಡು ಯಾರಿಗೂ ಕೇರ್ ಮಾಡದೆ ಉಡಾಫೆಯಿಂದ ಕಾಲ ಕಳೆಯುತ್ತಿದ್ದರು. ಹುಸಿ ಮೌಲ್ಯಗಳ ಬೆನ್ನು ಹತ್ತುವುದು, ಕಾನೂನನ್ನು ಕೈಗೆತ್ತಿಕೊಂಡು ಬೀದಿಯಲ್ಲಿ ರಕ್ತ ಸುರಿಸುವುದು ಅವರ ದಿನಚರಿಯಾಗಿತ್ತು.

ಚಿತ್ರರಂಗದ ಅದ್ವಿತೀಯ ತಾರೆ ಬಂದಾಗ ಕಾಸು ಕಮಾಯಿಸದೇ ಇರುವುದು ದಡ್ಡತನವೆಂದು ಭಾವಿಸಿ ಪ್ರವಾದಿ ನಟನನ್ನು ಪರೀಕ್ಷಿಸಿ 'ಏನೂ ತೊಂದರೆ ಇಲ್ಲ ಮಗು. ನೀನು ಎಂಬತ್ತು ವರ್ಷ ಸಲೀಸಾಗಿ ಬದುಕುತ್ತೀಯ. ಹೇಗೂ ನಮ್ಮಲ್ಲಿಗೆ ಬಂದಿರುವುದರಿಂದ ಇಪ್ಪತ್ತು ವರ್ಷಗಳಷ್ಟನ್ನಾದರೂ ಆಯಸ್ಸು ಹೆಚ್ಚಿಸಿಕೊಂಡು ಹೋಗು. ನಾನು ಹತ್ತು ನಿಮಿಷದಲ್ಲಿ ಇಪ್ಪತ್ತು ವರ್ಷ ಆಯಸ್ಸು ಕೊಡಬಲ್ಲೆ. ನೀನು ಶತಾಯುಷಿಯಾದಾಗ ನಾವೆಲ್ಲ ಈ ಕೇಂದ್ರದಲ್ಲಿಯೇ ಆಚರಿಸೋಣ. ಚಿರಂಜೀವಿಯಾದ ನಾನೇ ಮುಂದೆ ನಿಂತು ಆಚರಿಸುತ್ತೇನೆ' ಎಂದನು.

ನಟನ ಅಭಿಮಾನಿಯೊಬ್ಬ ತನ್ನ ಸಂಪೂರ್ಣ ಆಯಸ್ಸನ್ನು ನಟನಿಗೆ ಕೊಟ್ಟು ಆ ಕ್ಷಣವೇ ಸಾಯಲು ಸಿದ್ಧನಿದ್ದ. ಅವನನ್ನು ಸುಮ್ಮನಿರಿಸಲು ನಟನಿಗೂ ಪ್ರವಾದಿಗೂ ಸಾಕು ಸಾಕಾಯಿತು. ಅವನಿಂದ ಕೇವಲ ಇಪ್ಪತ್ತು ವರ್ಷ ಆಯಸ್ಸನ್ನು ನಟನಿಗೆ ವರ್ಗಾಯಿಸಲಾಯಿತು. ಆಯಸ್ಸಿನ ಹಣವನ್ನು ನಟನಿಂದ ಸ್ವೀಕರಿಸಲು ಅಭಿಮಾನಿ ನಿರಾಕರಿಸಿದ. ಆದರೆ ಪ್ರವಾದಿ ನಿರಾಕರಿಸಲಿಲ್ಲ.

ನಟನು ಪ್ರವಾದಿ ಕೇಂದ್ರಕ್ಕೆ ಬಂದಿರುವುದು ಗೊತ್ತಾಗಿ ಸಾವಿರಾರು ಅಭಿಮಾನಿಗಳು ಕೇಂದ್ರದ ಸುತ್ತ ಕಿಕ್ಕಿರಿದು ನಿಂತರು. ಆ ಪ್ರದೇಶದಲ್ಲಿ ಸಂಚಾರ ದಟ್ಟಣೆ ಹೆಚ್ಚಿ ವಾಹನಗಳು ಎಲ್ಲೆಂದರಲ್ಲಿ ಅಡ್ಡಾದಿಡ್ಡಿ ನಿಂತುಬಿಟ್ಟವು. ನಟನ ಕಾರು ಕದಲಲು ಒಂದೆರಡು ಗಂಟೆಯಾದರೂ ಬೇಕಿತ್ತು. ನಟನಿಗೆ ಹೌದೋ ಅಲ್ಲವೋ ಎನ್ನುವಂತೆ ಎದೆ ನೋವು ಕಾಣಿಸಿಕೊಂಡಿತು. ನೋವು ತೀವ್ರವಾಗುತ್ತಾ ಹೋಯಿತು. ಕಾರಿನ ಹವಾನಿಯಂತ್ರಣವಿದ್ದರೂ ಬೆವರು ಧಾರಾಕಾರ ಹರಿಯತೊಡಗಿತು. ಎಡ ಮೊಣಕೈಯಲ್ಲಿ, ಬೆನ್ನು ಕತ್ತಿನಲ್ಲಿ ನೋವು ಸಿಡಿಯತೊಡಗಿತು. ವಾಂತಿ ಮಾಡಬೇಕೆನಿಸಿತು. ನಟ ಕಾರಿನಿಂದಿಳಿದ. ವಾಂತಿಯಾಗಲಿಲ್ಲ. ಮತ್ತೆ ಕಾರು ಹತ್ತಿ ಕುಳಿತ. ದಿನವೂ ಉತ್ಕೃಷ್ಟ ಆಹಾರ ತೆಗೆದುಕೊಳ್ಳುವ, ವ್ಯಾಯಾಮ ಮಾಡಿ ಮೈ ದಂಡಿಸುವ ತನಗೆ ಏನೂ ಆಗದು ಎಂಬ

